ಉ ಇದರಲ್ಲಿ ಬಿಡುಗಡೆಯಾದ ಹಣ ಹಾಗೂ ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು, (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಮೂರು ಸ್ಥಳಗಳಲ್ಲಿ ಏತನೀರಾವರಿ ಯೋಜನೆಗಳನ್ನು ಮಾಡಬಹುದೆಂದು ಅಭಿಪ್ರಾಯ ಪಡಲಾಗಿದೆ.

1. ಯಲ್ಲಾಪುರ ತಾಲ್ಲೂಕಿನ ಬಸಲೇಬೈಲ
2. ಸುಪಾ ತಾಲ್ಲೂಕಿನ ರಾಮನಗರ
3. ಕುಮಟಾ ತಾಲ್ಲೂಕಿನ ಶಿರಕುಂಜಿ.

ಆ ಯಾವುದೂ ಇಲ್ಲ.

ಇ ಯಾವುದೇ ಯೋಜನೆಯನ್ನು ಇನ್ನೂ ಕಾರ್ಯಗತಗೊಳಿಸಿಲ್ಲ.

ಈ ಏತ ನೀರಾವರಿ ನಿಗಮದಿಂದ ಕೈಗೊಳ್ಳುವ ಪ್ರತಿ ಮುಂಗಡ ಪತ್ರದಲ್ಲಿ ಹಣವನ್ನೂ ಮೀಸಲಾಗಿ ಇಟ್ಟಿರುವುದಿಲ್ಲ. ಈ ಯೋಜನೆಗಳಿಗೆ ಹಣಕಾಸು ಸಂಸ್ಥೆಗಳಿಂದ ಅಂದಾಜು ಮೊಬಲಿಗಿನ ಪ್ರತಿಶತ 75 ರಷ್ಟು ಸಾಲ ಸೌಲಭ್ಯ ಪಡೆದುಕೊಂಡ ನಂತರ, ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಉ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳು

(2077)ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ):- , ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಇರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು ? (ಪ್ರತ್ಯೇಕ ಇಲಾಖಾವಾರು ವಿವರಗಳೊಡನೆ);

ಆ ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಇರುವ ಸರ್ಕಾರಿ ಕಛೇರಿಗಳಿಗೆ ಸರ್ಕಾರ ಪ್ರತಿ ತಿಂಗಳು ಪಾವತಿ ಮಾಡುತ್ತಿರುವ ಬಾಡಿಗೆ ಎಷ್ಟು?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ 95 ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡದಲ್ಲಿರುತ್ತವೆ. (ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿರುತ್ತೆ)

ಆ ಮಾಹೆಯಾನ ಒಟ್ಟು 3,95, 261 ರೂ.ಗಳು (ವಿವರ ಅನುಬಂಧ 'ಅ' ರಲ್ಲಿ ನೀಡಿರುತ್ತೆ)

ಅನುಬಂಧ-ಅ

ಬೆಂಗಳೂರು ನಗರದಲ್ಲಿ ಸರ್ಕಾರಿ ಕಛೇರಿಗಳು ಖಾಸಗೀ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರಗಳು.

ಕ್ರ.ಸಂ.	ಇಲಾಖೆಗಳು	ಕಛೇರಿಗಳ ಸಂಖ್ಯೆ	ತಿಂಗಳ ಬಾಡಿಗೆ ರೂ.ಗಳಲ್ಲಿ
1.	ಪೋಲೀಸ್ ಇಲಾಖೆ	19	32, 148

2.	ಸಮಾಜ ಕಲ್ಯಾಣ ಇಲಾಖೆ	17	19, 809
3.	ಸಹಕಾರ ಸಂಘಗಳ ಇಲಾಖೆ	4	7, 496
4.	ಆರೋಗ್ಯ ಇಲಾಖೆ	6	10, 574
5.	ಹಣಕಾಸಿನ ಇಲಾಖೆ	2	16, 156
6.	ಗ್ರಂಥಾಲಯ ಇಲಾಖೆ	15	22, 300
7.	ಪ್ರವಾಸೋದ್ಯಮ ಇಲಾಖೆ	3	9, 052
8.	ಕಾರ್ಮಿಕ ಇಲಾಖೆ	1	1, 450
9.	ಅರಣ್ಯ ಇಲಾಖೆ	2	1, 093
10.	ಕಾನೂನು ಇಲಾಖೆ	1	3, 500
11.	ಅಬಕಾರಿ ಇಲಾಖೆ	6	12,551
12.	ಲೋಕೋಪಯೋಗಿ ಇಲಾಖೆ	2	22,045
13.	ಬಾಡಿಗೆ ನಿಯಂತ್ರಣ ಇಲಾಖೆ	1	10,000
14.	ಉದ್ಯೋಗ ಮತ್ತು ತರಬೇತಿ ಇಲಾಖೆ	1	30,283
15.	ತೋಟಗಾರಿಕೆ ಇಲಾಖೆ	3	3,716
16.	ತೂಕ ಮತ್ತು ಅಳತೆ ಇಲಾಖೆ	5	3,471
17.	ಪಶುಸಂಗೋಪನೆ ಇಲಾಖೆ	1	1,047
18.	ಜಿಲ್ಲಾಧಿಕಾರಿಗಳ ಇಲಾಖೆ	1	1,25,000
19.	ವಾರ್ತಾ ಮತ್ತು ಪ್ರಸಾರ ಇಲಾಖೆ	1	1,000
20.	ಆಹಾರ ಮತ್ತು ಸರಬರಾಜು ಇಲಾಖೆ	1	3,000
21.	ಧಾರ್ಮಿಕ ದತ್ತಿ ಇಲಾಖೆ	1	9,000
22.	ವಾಣಿಜ್ಯ ತೆರಿಗೆ ಇಲಾಖೆ	1	5,570
23.	ಎನ್.ಸಿ.ಸಿ.ಇಲಾಖೆ (ಗೃಹ ಇಲಾಖೆ)	1	45,000
		---	---
		95	3,95,261
		---	---

ಯುವಜನ ಸೇವಾ ಇಲಾಖೆಯ ಸಿಬ್ಬಂದಿ ವರ್ಗದ ಬಗ್ಗೆ

(1757)ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಯುವಜನ ಸೇವಾ ಎನ್‌ಸಿಸಿ ನಿರ್ದೇಶನಾಲಯದಲ್ಲಿ 5 ವರ್ಷಗಳಿಗೆ ಮೇಲ್ಪಟ್ಟು ಬೆಂಗಳೂರು - ಮೈಸೂರು ನಗರಗಳಲ್ಲಿ ಮತ್ತು ಇತರೆ ಎಲ್ಲ ಜಿಲ್ಲೆಗಳಲ್ಲಿರುವ ಅಧಿಕಾರಿಗಳು, ನೌಕರರ ಸಂಖ್ಯೆ (ನಿಯೋಜನೆ ಮತ್ತು ಓ.ಓ.ಡಿ.ಒಳಪಟ್ಟಂತೆ)

ಆ ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ ,ಡಿ.ಪಿ.ಎ ಆರ್ 9 ಎಸ್‌ಟಿಆರ್ 84, ದಿನಾಂಕ: 5-9-85ರ ಸಾಮಾನ್ಯ ವರ್ಗಾವಣೆಯ ಮಾರ್ಗದರ್ಶನ ಅನ್ವಯಿಸದಿರಲು ಕಾರಣವೇನು ;